**ಕರ್ನಾಟಕ ಸರ್ಕಾರ**
**ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ**
**ಜಿಲ್ಲಾಡಳಿತ ಭವನ, ಶಿಡ್ಲಘಟ್ಟ ರಸ್ತೆ** **ದೂರವಾಣಿ: 08156-277016**
**ಇ-ಮೇಲ್: zpadmckbpur@gmail.com** **ಫ್ಯಾಕ್ಸ್: 08156-277011**

**ಸಂಖ್ಯೆ: ಜಿಪಂಚಿ/ಆಡಳಿತ/ಗ್ರಾ.ಗ್ರಂಮೇ.ನೇ/ತಾ,ಆ,ಪಟ್ಟಿ/ಸಿಆರ್-01/2024-25 ದಿನಾಂಕ:16 .06.2025.**

## ಅಧಿಸೂಚನೆ

**ವಿಷಯ:** ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ 21 ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ಮೇಲ್ವಿಚಾರಕರ ಖಾಲಿ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಕುರಿತು.

**ಉಲ್ಲೇಖ:**
1. ಮಾನ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: RDPR/156/GPA/2022(ಇ) ದಿನಾಂಕ: 14.11.2022.
2. ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಜಿಪಂಚಿ/ಆಡಳಿತ/ ಗ್ರಾ.ಗ್ರಂಮೇ.ನೇ/ ಸಿಆರ್-01/2024-25 ದಿನಾಂಕ: 28.08.2024.
3. ಆಯ್ಕೆ ಸಮಿತಿ ಸಭೆಯ ದಿನಾಂಕ: 18.02.2025.
4. ಈ ಕಛೇರಿಯ ತಾತ್ಕಾಲಿಕ ಆಯ್ಕೆ ಪಟ್ಟಿಯ ಅಧಿಸೂಚನೆ ಸಂಖ್ಯೆ: ಜಿಪಂಚಿ/ಆಡಳಿತ/ಗ್ರಾ.ಗ್ರಂಮೇ.ನೇ/ತಾ,ಆ,ಪಟ್ಟಿ/ಸಿಆರ್-01/2024-25 ದಿನಾಂಕ:29.03.2025.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಅಧಿಸೂಚನೆಯನ್ವಯ ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ 21 ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳಲ್ಲಿ ಖಾಲಿಯಿರುವ ಮೇಲ್ವಿಚಾರಕರ ಹುದ್ದೆಗಳನ್ನು ಭರ್ತಿ ಮಾಡಲು ಉಲ್ಲೇಖ (2) ಅಧಿಸೂಚನೆಯನ್ನು ಹೊರಡಿಸಿ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

ಉಲ್ಲೇಖ(3) ರಂತೆ ದಿನಾಂಕ: 18.02.2025 ರಂದು ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ರವರ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿ ಸಭೆಯ ಶಿಫಾರಸ್ಸಿನಂತೆ ಈ ಕಛೇರಿಯ ನೇಮಕಾತಿ ಅಧಿಸೂಚನೆ ದಿನಾಂಕ:28.08.2024 ರನ್ವಯ ಅಧಿಸೂಚಿಸಿದ 21 ಗ್ರಾಮ ಪಂಚಾಯಿತಿ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರಗಳಲ್ಲಿ ಖಾಲಿ ಇರುವ ಮೇಲ್ವಿಚಾರಕರ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ಕಲ್ಪಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಉಲ್ಲೇಖ (4)ರ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿರುತ್ತದೆ.

ಅದರಂತೆ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಲು ದಿನಾಂಕ:16.05.2025 ರಂದು ಸಭೆಯನ್ನು ನಡೆಸಿ, ಸದರಿ ಸಭೆಯಲ್ಲಿ ಸ್ವಿಕೃತವಾಗಿರುವ ಆಕ್ಷೇಪಣೆಗಳಿಗೆ ಸಂಬಂಧಿಸಿದ ಆಕ್ಷೇಪಣೆಗಾರರು/ ಅಭ್ಯರ್ಥಿಗಳಿಗೆ ದಾಖಲೆಗಳನ್ನು ಪರಿಶೀಲಿಸಲು ಅವಕಾಶ ಕಲ್ಪಿಸಿ ಹಿಂಬರಹಗಳನ್ನು ನೀಡಲು ಕ್ರಮ ವಹಿಸಲಾಗಿರುತ್ತದೆ.

ಈ ಮೇಲಿನ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ 21 ಗ್ರಾಮ ಪಂಚಾಯಿತಿ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರ (ಅರಿವು ಕೇಂದ್ರ) ಗಳ ಮೇಲ್ವಿಚಾರಕ ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಅನುಬಂಧ-1ರಲ್ಲಿ ಪ್ರಕಟಿಸುತ್ತಾ, ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರದ ಮೇಲ್ವಿಚಾರಕರ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ಈ ಕೆಳಕಂಡ ಷರತ್ತುಗಳಿಗೊಳಪಟ್ಟು, ದಾಖಲೆಗಳನ್ನು ಪರಿಶೀಲಿಸಿ ನಂತರ ನೇಮಕಾತಿ ಆದೇಶವನ್ನು ಹೊರಡಿಸಲು ಸೂಚಿಸಿದೆ.

>> 2

**ಷರತ್ತುಗಳು:**

1. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಅಭ್ಯರ್ಥಿಯ ಈ ಕೆಳಗಿನ ದಾಖಲೆಗಳನ್ನು ಪಡೆದು, ಸದರಿ ದಾಖಲೆಗಳನ್ನು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಗಳಿಂದ ನೈಜತೆಯ ದೃಢೀಕರಣ ಪಡೆಯತಕ್ಕದ್ದು.
   - ಅಭ್ಯರ್ಥಿಯ ಪಿ.ಯು.ಸಿ / ಸರ್ಟಿಫಿಕೇಷನ್ ಕೋರ್ಸ್ ಇನ್ ಲೈಬ್ರರಿ ಸೈನ್ಸ್ ನಲ್ಲಿ ಉತ್ತೀರ್ಣರಾಗಿರುವ ಅಂಕಪಟ್ಟಿಗಳು.
   - ಅಭ್ಯರ್ಥಿಯು ಸ್ಥಳೀಯ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಬಗ್ಗೆ ತಹಶೀಲ್ದಾರ್ ರವರಿಂದ ಪಡೆದ ವಾಸ ಸ್ಥಳ ದೃಢೀಕರಣ ಪತ್ರ.
   - ನಿಗದಿಪಡಿಸಲಾದ ಮೀಸಲಾತಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರ ನೀಡಿದ ಧೃಡೀಕರಣ ಪತ್ರ;
   - ಮಾನ್ಯತೆ ಪಡೆದ ಸಂಸ್ಥೆಗಳಿಂದ ಪಡೆದಿರುವ ಕಂಪ್ಯೂಟರ್ ಕೋರ್ಸ್ ಪ್ರಮಾಣ ಪತ್ರ
   - ಎಸ್‌ಎಸ್‌ಎಲ್‌ಸಿ ಅಂಕ ಪಟ್ಟಿ (ವಯಸ್ಸಿನ ದೃಢೀಕರಣಕ್ಕಾಗಿ).

2. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಮೇಲ್ಕಂಡ ಪ್ರಮಾಣ ಪತ್ರಗಳನ್ನು ಪರಿಶೀಲಿಸಿದ ನಂತರ ನೇಮಕಾತಿ ಆದೇಶ ಹೊರಡಿಸತಕ್ಕದ್ದು ಹಾಗೂ ನಂತರ ಹದಿನೈದು ದಿವಸಗಳೊಳಗಾಗಿ ಆಯ್ಕೆಯಾದ ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗಲು ಸೂಚಿಸತಕ್ಕದ್ದು.

3. ಒಂದು ವೇಳೆ ಸದರಿ ಕಾಲಾವಧಿಯಲ್ಲಿ ಆ ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ, ಅದೇ ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಕ್ಕೆ ನಿಗಧಿಯಾದ ಮೀಸಲಾತಿ ವರ್ಗದಲ್ಲಿನ ಎರಡನೇ ಸ್ಥಾನದಲ್ಲಿರುವ ಅಭ್ಯರ್ಥಿಯನ್ನು ಆಯ್ಕೆ ಮಾಡಲು ಕೂಡಲೇ ವರದಿಯನ್ನು ಸದಸ್ಯ ಕಾರ್ಯದರ್ಶಿಯವರಿಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಸಲ್ಲಿಸತಕ್ಕದ್ದು.

4. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಪ್ರಮಾಣ ಪತ್ರಗಳನ್ನು ಪರಿಶೀಲಿಸಿ, ಎಲ್ಲಾ ದಾಖಲೆ/ಪ್ರಮಾಣ ಪತ್ರಗಳು ಸರಿಯಿರುವ ಬಗ್ಗೆ ದೃಢೀಕರಿಸಿಕೊಂಡು ಪರಿಶೀಲಿಸಿದ ನಂತರ ಅಂತಹ ಅಭ್ಯರ್ಥಿಗೆ ನಿಯಮಾನುಸಾರ ನೇಮಕಾತಿ ಆದೇಶ ನೀಡತಕ್ಕದ್ದು.

5. ಮೇಲ್ವಿಚಾರಕರ ಹುದ್ದೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಮಯದಲ್ಲಿ ಸಲ್ಲಿಸಿರುವ ಮಾಹಿತಿ/ದಾಖಲೆಗಳು ಸುಳ್ಳು/ನಕಲಿ ಎಂದು ಕಂಡುಬಂದಲ್ಲಿ ಈ ನೇಮಕಾತಿಯು ಆಗಿಂದಾಗ್ಗೆ ರದ್ದಾಗುವುದು.

6. ಈ ಅಂತಿಮ ಆಯ್ಕೆ ಪಟ್ಟಿಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ WP-13448/2025, WP-13447/ 2025, WP-13447/ 2025 ಮತ್ತು WP-13463/2025 ರ ಅಂತಿಮ ಆದೇಶಗಳಿಗೆ ಒಳಪಟ್ಟಿರುತ್ತದೆ.

**ಉಪ ಕಾರ್ಯದರ್ಶಿ ಹಾಗೂ**
**ಸದಸ್ಯ ಕಾರ್ಯದರ್ಶಿ,**
**ಗ್ರಾಮ ಪಂಚಾಯಿತಿ ಗ್ರಂಥಾಲಯ ಹಾಗೂ ಮಾಹಿತಿ**
**ಕೇಂದ್ರದ ಮೇಲ್ವಿಚಾರಕರ ಆಯ್ಕೆ ಸಮಿತಿ**
**ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.**

**ಪ್ರತಿಯನ್ನು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ.
2. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ.

>> 3

3. ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ ಹಾಗೂ ಸೂಚನಾ ಫಲಕಗಳಲ್ಲಿ ಅಳವಡಿಸಲು.
4. ಜಿಲ್ಲಾ ಸೂಚನಾ ವಿಜ್ಞಾನಾಧಿಕಾರಿ, ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ, ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ ಇವರು ವೆಬ್ ಸೈಟ್ ನಲ್ಲಿ ಪ್ರಕಟಿಸಲು ತಿಳಿಸಿದೆ.
5. ಮುಖ್ಯ ಗ್ರಂಥಾಲಯಾಧಿಕಾರಿ, ಜಿಲ್ಲಾ ಕೇಂದ್ರ ಗ್ರಂಥಾಲಯ, ಚಿಕ್ಕಬಳ್ಳಾಪುರ ರವರ ಮಾಹಿತಿಗಾಗಿ.
6. ಸಂಬಂಧಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ ಅಗತ್ಯ ಕ್ರಮಕ್ಕಾಗಿ ಹಾಗೂ ಸೂಚನಾ ಫಲಕದಲ್ಲಿ ಅಳವಡಿಸಲು.
7. ಜಿಲ್ಲಾ ಯೋಜನಾ ವ್ಯವಸ್ಥಾಪಕರು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಇವರಿಗೆ ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ಇವರು ವೆಬ್ ಸೈಟ್ ನಲ್ಲಿ ಪ್ರಕಟಿಸಲು ಕ್ರಮ ವಹಿಸುವುದು.
8. ಸಂಬಂಧಿಸಿದ ಅಭ್ಯರ್ಥಿಗಳಿಗೆ ಮಾಹಿತಿಗಾಗಿ.
9. ಕಛೇರಿ ಪ್ರತಿ.

## ಅನುಬಂಧ-1

## ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ

## ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರ (ಅರಿವು ಕೇಂದ್ರ) ಗಳಲ್ಲಿ ಖಾಲಿ ಇರುವ ಮೇಲ್ವಿಚಾರಕರ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ.

| ಕ್ರ. ಸಂ | ತಾಲ್ಲೂಕು | ಗ್ರಾಮ ಪಂಚಾಯಿತಿ ಹೆಸರು | ಆಯ್ಕೆಯಾದ ಅಭ್ಯರ್ಥಿಯ ಹೆಸರು | ನಿಗದಿಪಡಿಸಿದ ಮೀಸಲಾತಿ | ಷರಾ |
|---|---|---|---|---|---|
| 1 | ಬಾಗೇಪಲ್ಲಿ | ಮಿಟ್ಟೇಮರಿ | ಮಾವಿಕ. ಎಸ್ | ಪರಿಶಿಷ್ಟ ಜಾತಿ(ಇತರೆ) | |
| 2 | ಗುಡಿಬಂಡೆ | ಉಲ್ಲೋಡು | ಲಕ್ಷ್ಮೀ. ಎನ್ | ಸಾಮಾನ್ಯ (ಇತರೆ) | |
| 3 | ಚೇಳೂರು | ಬುರುಡುಗುಂಟೆ | ಹರೀಶ್. ಎಸ್ | ಪರಿಶಿಷ್ಟ ಪಂಗಡ (ಇತರೆ) | |
| 4 | ಚಿಂತಾಮಣಿ | ಯಗವಕೋಟೆ | - | ಸಾಮಾನ್ಯ (ಮಹಿಳಾ ಅಭ್ಯರ್ಥಿ) | ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP-13463/2025 ರಂತೆ ಪ್ರಕರಣ ದಾಖಲಾಗಿರುತ್ತದೆ |
| 5 | ಚೇಳೂರು | ಚಾಕವೇಲು | ಮನೋಜ್ ಕುಮಾರ್ ಪಿ ಎಂ | ಪ್ರವರ್ಗ- 1 (ಇತರೆ) | |
| 6 | ಚಿಕ್ಕಬಳ್ಳಾಪುರ | ಹಾರೋಬಂಡೆ | - | ಸಾಮಾನ್ಯ (ಗ್ರಾಮೀಣ ಅಭ್ಯರ್ಥಿ) | ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP-13447/ 2025 ರಂತೆ ಪ್ರಕರಣ ದಾಖಲಾಗಿರುತ್ತದೆ |
| 7 | ಚಿಕ್ಕಬಳ್ಳಾಪುರ | ಪೆರೇಸಂದ್ರ | ಗೋಪಾಲ ಕೆ | ಪ್ರವರ್ಗ- IIA (ಇತರೆ) | |
| 8 | ಚಿಂತಾಮಣಿ | ಕೋಟಗಲ್ | ಮಜೀದಾ ಭಾನು ಎ | ಸಾಮಾನ್ಯ (ಅಂಗವಿಕಲ ಅಭ್ಯರ್ಥಿ) | |
| 9 | ಚಿಂತಾಮಣಿ | ಹಿರೇಕಟ್ಟಿಗೇನಹಳ್ಳಿ | ಸಂಗೀತಾ ಎನ್ | ಪರಿಶಿಷ್ಟ ಜಾತಿ (ಮಹಿಳಾ ಅಭ್ಯರ್ಥಿ) | ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP-13447/ 2025 ರಂತೆ ಪ್ರಕರಣ ದಾಖಲಾಗಿದ್ದು, ಈ ನೇಮಕಾತಿಯು ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ. |
| 10 | ಶಿಡ್ಲಘಟ್ಟ | ಬಶೆಟ್ಟಿಹಳ್ಳಿ | ಅಶ್ವಿನಿ ಎಸ್.ಜೆ | ಸಾಮಾನ್ಯ (ಮಹಿಳಾ ಅಭ್ಯರ್ಥಿ) | |
| 11 | ಮಂಚೇನಹಳ್ಳಿ | ಹಳೇಹಳ್ಳಿ | ಅರ್ಹ ಅಭ್ಯರ್ಥಿ ಇರುವುದಿಲ್ಲ | ಪ್ರವರ್ಗ- II B (ಇತರೆ) | |
| 12 | ಚಿಕ್ಕಬಳ್ಳಾಪುರ | ಅಗಲಗುರ್ಕಿ | ಭಾರ್ಗವಿ ಎಸ್.ವಿ | ಸಾಮಾನ್ಯ (ಗ್ರಾಮೀಣ ಅಭ್ಯರ್ಥಿ) | |
| 13 | ಚಿಕ್ಕಬಳ್ಳಾಪುರ | ಅಡ್ಡಗಲ್ಲು | ಬಿ ದುರ್ಗ ಲಕ್ಷ್ಮೀ | ಪ್ರವರ್ಗ- II A (ಮಹಿಳಾ ಅಭ್ಯರ್ಥಿ) | |
| 14 | ಚೇಳೂರು | ಪೋಲನಾಯಕನಪಲ್ಲಿ | ಮಲ್ಲಿಕಾರ್ಜುನ ವಿ | ಸಾಮಾನ್ಯ (ಇತರೆ) | |
| 15 | ಚಿಂತಾಮಣಿ | ಮಿಂಡಿಗಲ್ | ಶ್ರೀಕಾಂತ್ ಜಿ.ಕೆ | ಪರಿಶಿಷ್ಟ ಜಾತಿ (ಗ್ರಾಮೀಣ ಅಭ್ಯರ್ಥಿ) | |
| 16 | ಮಂಚೇನಹಳ್ಳಿ | ಶ್ಯಾಂಪುರ | - | ಸಾಮಾನ್ಯ (ಮಹಿಳಾ ಅಭ್ಯರ್ಥಿ) | ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP-13448/2025 ರಂತೆ ಪ್ರಕರಣ ದಾಖಲಾಗಿರುತ್ತದೆ |
| 17 | ಚೇಳೂರು | ನಾರೇಮದ್ದೇಪಲ್ಲಿ | ಅರುಣ್ ಜಿ.ಆರ್ | ಪ್ರವರ್ಗ- III A (ಇತರೆ) | |

>> 2

| | | | | | |
|---|---|---|---|---|---|
| 18 | ಶಿಡ್ಲಘಟ್ಟ | ದೊಡ್ಡತೇಕಹಳ್ಳಿ | ವಾಣಿ ಕೆ.ಎ | ಪರಿಶಿಷ್ಟ ಪಂಗಡ (ಮಹಿಳಾ ಅಭ್ಯರ್ಥಿ) | |
| 19 | ಶಿಡ್ಲಘಟ್ಟ | ಕುಂದಲಗುರ್ಕಿ | ಸುಧಾ ಎಂ | ಪ್ರವರ್ಗ- III B (ಇತರೆ) | |
| 20 | ಮಂಚೇನಹಳ್ಳಿ | ಪುರ | ಕಾವ್ಯ ಜೆ.ಎಸ್ | ಸಾಮಾನ್ಯ (ಗ್ರಾಮೀಣ ಅಭ್ಯರ್ಥಿ) | |
| 21 | ಗೌರಿಬಿದನೂರು | ಮುದಲೋಡು | ಮಮತ ಎನ್ | ಪ್ರವರ್ಗ- II A (ಗ್ರಾಮೀಣ ಅಭ್ಯರ್ಥಿ) | |

**ಷರಾ:** ಈ ಅಂತಿಮ ಆಯ್ಕೆ ಪಟ್ಟಿಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ WP-13448/2025, WP-13447/ 2025, WP-13447/ 2025 ಮತ್ತು WP-13463/2025 ರ ಅಂತಿಮ ಆದೇಶಗಳಿಗೆ ಒಳಪಟ್ಟಿರುತ್ತದೆ.

**ಉಪ ಕಾರ್ಯದರ್ಶಿ**
**ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ**

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ**
**ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ**